# ಎನ್‌ಐಟಿಕೆ ಸಿಆರ್‌ಎಫ್, ಸಿಐಎಸ್ ಕಟ್ಟಡ ನಾಳೆ ಲೋಕಾರ್ಪಣೆ

**ಮಂಗಳೂರು:** ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ ಸಂಸ್ಥೆಯ ಇಪ್ಪತ್ತನೇ ವಾರ್ಷಿಕ ಘಟಿಕೋತ್ಸವ ಅ.15ರಂದು ಬೆಳಗ್ಗೆ 10.30ಕ್ಕೆ ನಡೆಯಲಿದ್ದು, ಈ ಸಂದರ್ಭ ಸಿಆರ್‌ಎಫ್ ಮತ್ತು ಸಿಐಎಸ್ ಕಟ್ಟಡವನ್ನು ಕೇಂದ್ರ ಶಿಕ್ಷಣ, ಕೌಶಲ್ಯಾಭಿವೃದ್ಧಿ ಸಚಿವ ಧರ್ಮೇಂದ್ರ ಪ್ರಧಾನ್ ಉದ್ಘಾಟಿಸಲಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಸುರತ್ಕಲ್ ಎನ್‌ಐಟಿಕೆ ಪ್ರಭಾರ ನಿರ್ದೇಶಕ ಪ್ರೊ.ಜಿ.ಸಿ. ಮೋಹನ್ ಕುಮಾರ್ ಮಾತನಾಡಿ, ''48 ಕೋಟಿ ರೂ. ವೆಚ್ಚದಲ್ಲಿ 10,394 ಚದರ ಮೀಟರ್ ವಿಸ್ತೀರ್ಣದಲ್ಲಿ ಹೊಸದಾಗಿ ನಿರ್ಮಿಸಲಾದ ಕೇಂದ್ರೀಯ ಸಂಶೋಧನಾ ಸೌಲಭ್ಯ ಮತ್ತು (ಸಿಆರ್ ಎಫ್) ಸ್ಕೂಲ್ ಆಫ್ ಇಂಟರ್ ಡಿಸಿಪ್ಲಿನರಿ ಸ್ಟಡೀಸ್ (ಸಿಐಎಸ್) ಕಟ್ಟಡವನ್ನು ಸಚಿವರು ಉದ್ಘಾಟಿಸಲಿದ್ದಾರೆ. 54.76 ಕೋಟಿ ರೂ. ವೆಚ್ಚದ 11246 ಚದರ ಮೀಟರ್ ವಿಸ್ತೀರ್ಣದ ಲೆಕ್ಚರ್ ಹಾಲ್ ಕಾಂಪ್ಲೆಕ್ಸ್-ಬ್ಲಾಕ್ ಡಿ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಲಿದ್ದಾರೆ. ಎನ್‌ಐಟಿಕೆ ಸುರತ್ಕಲ್ ಎನ್‌ಐಟಿಗಳಲ್ಲಿ ಎಚ್‌ಎಫ್‌ಎಯ ಹಣಕಾಸುಗಳನ್ನು ಸಿಆರ್‌ಎಫ್ ಸ್ಥಾಪಿಸಲು ಬಳಸಿದ ಮೊದಲನೆಯದು ಭಾರತ ಸರಕಾರದ ಉನ್ನತ ಶಿಕ್ಷಣ ಹಣಕಾಸು ಸಂಸ್ಥೆ (ಎಚ್‌ಇಎಫ್‌ಎ) ಯಿಂದ 80 ಕೋಟಿ ರೂ. ಆರ್ಥಿಕ ನೆರವಿನೊಂದಿಗೆ ಕೇಂದ್ರೀಯ ಸಂಶೋಧನಾ ಫೆಸಿಲಿಟಿ ಎನ್‌ಐಟಿಕೆಯನ್ನು ಸ್ಥಾಪಿಸಲಾಗಿದೆ ಎಂದರು.

**ಅ.15ರಂದು ಎನ್‌ಐಟಿಕೆ ಘಟಿಕೋತ್ಸವ:** ಐಟಿಕೆ 20ನೇ ವಾರ್ಷಿಕ ಘಟಿಕೋತ್ಸವ ಅ.15ರಂದು ಬೆಳಗ್ಗೆ 10.30ಕ್ಕೆ ಎನ್‌ಐಟಿಕೆ ಸುರತ್ಕಲ್‌ನ ಹೊಸ ಕ್ರೀಡಾ ಸಂಕೀರ್ಣದಲ್ಲಿ ನಡೆಯಲಿದೆ. ಸಚಿವ ಧರ್ಮೇಂದ್ರ ಪ್ರಧಾನ್ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಹಳೇ ವಿದ್ಯಾರ್ಥಿಗಳಾದ ಬೆಂಗಳೂರಿನ ಸೋನಾ ಗ್ರೂಪ್ ಆಫ್ ಇಂಡಸ್ಟ್ರೀಸ್ ವ್ಯವಸ್ಥಾಪಕ ನಿರ್ದೇಶಕ ಯಜ್ಞ ನಾರಾಯಣ ಮತ್ತು ಭಾರತೀಯ ವಲಯ ಮೈರೆ ಟೆಕ್ನಿಮಾಂಟ್ ಉಪಾಧ್ಯಕ್ಷ ಮಿಲಿಂಗ್ ವಿ. ಬರಿಡೇ ಭಾಗವಹಿಸಲಿದ್ದಾರೆ'' ಎಂದರು.

''ಒಟ್ಟು 1878 ಅಭ್ಯರ್ಥಿಗಳು ಪದವಿ, 126 ಪಿಎಚ್‌ಡಿ, 817 ಪಿಜಿ ಮತ್ತು 844 ಬಿ.ಟೆಕ್ ವಿದ್ಯಾರ್ಥಿಗಳು ಸೇರಿದ್ದಾರೆ. 249 ಬಿ.ಟೆಕ್ ವಿದ್ಯಾರ್ಥಿಗಳಿಗೆ ತಮ್ಮ ಬಿ.ಟೆಕ್ ಪದವಿಯೊಂದಿಗೆ ಇತರ ವಿಭಾಗಗಳಲ್ಲಿ ಮೈನರ್ ಪದವಿಯನ್ನು ಸಹ ನೀಡಲಾಗುತ್ತಿದೆ. ಒಂಬತ್ತು ಬಿ.ಟೆಕ್ ವಿದ್ಯಾರ್ಥಿಗಳು, 30 ಪಿಜಿ ವಿದ್ಯಾರ್ಥಿಗಳು ಅತ್ಯಧಿಕ ಸಿಜಿಪಿಎ ಗಳಿಸುವುದಕ್ಕಾಗಿ ಚಿನ್ನದ ಪದಕಗಳು ಮತ್ತು ಪದಕಗಳನ್ನು ಸ್ವೀಕರಿಸಲಿದ್ದಾರೆ'' ಎಂದರು.

ಡೀನ್ ಡಾ.ವಿದ್ಯಾ ಶೆಟ್ಟಿ, ಪ್ರೊ. ಅರುಣ್, ಎನ್‌ಐಟಿಕೆ ಸಾರ್ವಜನಿಕ ಸಂಪರ್ಕಾಧಿಕಾರಿ ವೈಷ್ಣವಿ ಆರ್. ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

Vijaya Karnataka, Date: 14/10/22. p, no - Sudina - I